ಪೀಕುಗಳನ್ನು ಬೆಳೆದುಕೊಳ್ಳಬಹುದು. ಕೀಟದ ಬಾಧೆ ಕೂಡ ಈ ವರ್ಷ ಕಡಿಮೆ ಇದೆ. ಇಂತಹ ಸಂದರ್ಭದಲ್ಲಿ ಜನರು ಮತ್ತೂ ರೊಚ್ಚಿಗೇಳುವ ರೀತಿಯಲ್ಲಿ ಕೆಇಬಿ ಅಧಿಕಾರಿಗಳು ನಡೆದುಕೊಂಡರೆ ಇಲ್ಲಿಯ ಹೋರಾಟ ಇನ್ನಷ್ಟು ಜಾಸ್ತಿಯಾಗುವ ಸಂಭವವಿದೆ.

11.50 ಎಎಂ

ಈ ಕಾರಣಕ್ಕಾಗಿ ನಾಳೆ ಮಂಗಳವಾರದವರೆಗೆ ೧೭ನೇ ತಾರೀಖಿನವರೆಗೆ ಅವಧಿಯನ್ನು ಕೊಟ್ಟಿದ್ದಾರೆ. ಅಷ್ಟರ ಒಳಗೆ ಅದು ಸರಿ ಹೋಗದೆ ಇದ್ದರೆ ನಾನೂ ಕೂಡ ಅವರ ಜೊತೆ ಕೂಡಬೇಕಾದಂತಹ ಸಂದರ್ಭ ಬರುತ್ತದೆ. ಆ ಪರಿಸ್ಥಿತಿ ಬರುವುದಕ್ಕಿಂತ ಮೊದಲು, ಯಾವುದಾದರೂ ಒಂದು ರೀತಿಯಲ್ಲಿ ಅದನ್ನು ಬಗೆಹರಿಸಬೇಕೆಂದು ನಾನು ವಿದ್ಯುತ್ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಶರಣಬಸಪ್ಪ ದರ್ಶನಾಪುರ (ಇಂಧನ ಸಚಿವರು) : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಇದರ ಬಗ್ಗೆ ಗುರುವಾರದಿಂದ ನನ್ನ ಗಮನಕ್ಕೆ ತರುತ್ತಿದ್ದಾರೆ. ಶನಿವಾರ ನಾನು ಆ ಚೀಫ್ ಇಂಜಿನಿಯರ್‌ರವರನ್ನು ಕರೆಸಿ ನಾನು ಇದರ ಬಗ್ಗೆ ಮಾತನಾಡಿದ್ದೇನೆ. ಇವತ್ತು ಎಕ್ಸಿಕ್ಯೂಟೀವ್ ಇಂಜಿನಿಯರ್ ಹುಬ್ಬಳ್ಳಿಗೆ ಬಂದಿದ್ದಾರೆ. ಹುಬ್ಬಳ್ಳಿಯಲ್ಲಿ ಏನೇನು ಆಲ್ಟರ್ನೇಟಿವ್ ಅರೇಂಜ್‌ಮೆಂಟ್ಸ್ ಆಗಬೇಕು ಅದನ್ನು ಇವತ್ತು ಸಂಜೆಯೊಳಗೆ ಅಥವಾ ನಾಳೆ ಬೆಳಿಗ್ಗೆಯೊಳಗೆ ಆಲ್ಟರ್ನೇಟಿವ್ ಅರೇಂಜ್‌ಮೆಂಟ್ಸ್ ಮಾಡಿಕೊಳ್ಳುತ್ತೇವೆ. ಈ ಗುಡೂರು ಗ್ರಾಮದ ಸಮಸ್ಯೆ ಬಗೆಹರಿಯಬೇಕಾದರೆ ಸಬ್‌ಸ್ಟೇಷನ್ ಆದರೆ ಮಾತ್ರ ಸಮಸ್ಯೆ ಬಗೆಹರಿಯುತ್ತದೆ. ನಾವು ಮೇ ತಿಂಗಳಲ್ಲಿ ಸಬ್‌ಸ್ಟೇಷನ್ ಕೂಡ ಪ್ರಾರಂಭ ಮಾಡಿ ಆರು ಅಥವಾ ಎಂಟು ತಿಂಗಳ ಒಳಗೆ ಆ ಸಬ್‌ಸ್ಟೇಷನ್ ಕೂಡ ಮುಗಿಸಿಕೊಡುತ್ತೇವೆ. ನಾಳೆಯೊಳಗಾಗಿ ಆದಷ್ಟು ಟೆಂಪರ್ವರಿ ಅರೇಂಜ್‌ಮೆಂಟ್ಸ್ ಏನು ಮಾಡಬೇಕು ಅದನ್ನು ಮಾಡಿಕೊಡುತ್ತೇವೆಂದು ತಮ್ಮ ಮುಖಾಂತರ ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ.

ಇ) ಪುತ್ತೂರಿನಲ್ಲಿ ಮೃತಪಟ್ಟ ಸೌಮ್ಯಳ ಕುಟುಂಬಕ್ಕೆ ಪರಿಹಾರ ನೀಡದೇ ಇರುವ ಬಗ್ಗೆ

+ ಶ್ರೀ ಡಿ.ವಿ. ಸದಾನಂದಗೌಡ (ಪುತ್ತೂರು) : ಮಾನ್ಯ ಅಧ್ಯಕ್ಷರೆ, ಪುತ್ತೂರಿನಲ್ಲಿ ಕಳೆದ ವರ್ಷ ನಡೆದ ಸೌಮ್ಯಳ ಕೊಲೆ ಪ್ರಕರಣದ ಸಂದರ್ಭದಲ್ಲಿ ವಿಧಾನ ಸಭಾ ಕಲಾಪದ ವೇಳೆಯಲ್ಲಿ ಮೃತ ಸೌಮ್ಯಳ ಕುಟುಂಬಕ್ಕೆ ಒಂದು ಲಕ್ಷ ರೂಪಾಯಿ ಪರಿಹಾರವನ್ನು ಸರ್ಕಾರ ಘೋಷಿಸಿತ್ತು. ಆದರೆ ಈ ತನಕ ಆದರ ಪಾವತಿಯಾಗಲಿಲ್ಲ. ಮೊನ್ನೆ ಮೊನ್ನೆ ದಕ್ಷಿಣ ಕನ್ನಡದ ಜಿಲ್ಲೆಯಲ್ಲಿ ನಡೆದಂತಹ ಕೋಮು ಗಲಭೆ ಸಂದರ್ಭದಲ್ಲಿ ಏನು ಪರಿಹಾರ ಕೊಡಬೇಕೆಂದು ತೀರ್ಮಾನ ಮಾಡಿತ್ತು. ಆದನ್ನು ಕೇವಲ ಒಂದು ವಾರದಲ್ಲಿ ಎಲ್ಲಾ ಪಾವತಿ ಮಾಡಿದೆ. ಇದೇ ರೀತಿಯ ಗಲಭೆ ಆಗಿತ್ತು. ಸದನದಲ್ಲಿ ಭಾರೀ ದೊಡ್ಡ ಚರ್ಚೆಯಾಗಿ ಮುಖ್ಯಮಂತ್ರಿಗಳಿಂದ ಪರಿಹಾರ ಘೋಷಣೆಯಾಗಿದ್ದರೂ ಕೂಡ ಇದುವರೆಗೆ ಒಂದು ಲಕ್ಷ ರೂಪಾಯಿ ಪರಿಹಾರ ಮಂಜೂರು ಮಾಡದೆ ಇರುವುದು ಅತ್ಯಂತ ದುರಾದೃಷ್ಟಕರ. ಸದನದಲ್ಲಿ ಹೇಳಿಕೆ ಕೊಟ್ಟ ಮೇಲೆ ಕೂಡ ಅದು ಮಾಡಲಿಲ್ಲ ಅಂದ ಮೇಲೆ ತಾವು ಆಗಲೇ ಹೇಳಿದ ಹಾಗೆ ಏನು ಮಾಡಬೇಕು?

ಶ್ರೀ ಎಂ. ಪಿ. ಪ್ರಕಾಶ್ : ಶೀಘ್ರ ಕ್ರಮ ಕೈಗೊಂಡು ಇನ್ನು ಎರಡು - ಮೂರು ದಿವಸದ ಒಳಗೆ ಕ್ರಮ ತೆಗೆದುಕೊಂಡು ಕೊಡುತ್ತೇವೆ.